ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ , ಕುಂದಾಪುರ

ಸಿ.ಸಿ. ನಂಬ್ರಃ 428/2014

ಚಾಸಾ-7 ಪ್ರಾಸಾಃ4

ದಿನಾಂಕಃ 19.12.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಅಮಿತ್ ಕೋಟ್ಯಾನ್ |
| ತಂದೆಯ ಹೆಸರು | : | ಆನಂದ ಎಸ್ ಕೋಟ್ಯಾನ್ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ಕಟಪಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ</u>**

ನನಗೆ ಘಟನೆ ಬಗ್ಗೆ ಏನೂ ಗೊತ್ತಿಲ್ಲ. ಪೊಲೀಸರು ಹೇಳಿದ ಮೇರೆಗೆ ಪೊಲೀಸ್ ಠಾಣೆಯಲ್ಲಿ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಅದರಲ್ಲಿರುವ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಸಾಕ್ಷಿಗೆ ದಸ್ತಗಿರಿ ಮತ್ತು ಸ್ವತ್ತು ಸ್ವಾಧೀನತಾ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದಾಖಲೆಯನ್ನು ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 26-10-2013 ರಂದು ಇಬ್ಬರು ವ್ಯಕ್ತಿಗಳು ಮಹಿಳೆಯರ ಸರ ಎಳೆದುಕೊಂಡು ಹೋಗಿರುವುದಾಗಿ ಮಾಹಿತಿ ಬಂದ ಮೇರೆಗೆ ಪೊಲೀಸರು ಬೇರೆ ಬೇರೆ ಸ್ಥಳಗಳಲ್ಲಿ ತಪಾಸಣೆ ನಡೆಸುತ್ತಿದ್ದು, ತೆಕ್ಕಲ್ ತೋಟ ಜಂಕ್ಷನ್ ನಿಂದ ಕಟಪಾಡಿ ರಸ್ತೆಯಲ್ಲಿ ಪರ್ಸನಲ್ ಕಾಂಪ್ಲೆಕ್ಸ್ ಬಳಿ ಒಂದು ಬೈಕಿನಲ್ಲಿ ಇಬ್ಬರು ಅತೀ ವೇಗವಾಗಿ ಬರುತ್ತಿದ್ದು ಜೀಪನ್ನು ನೋಡಿ ಒಮ್ಮೇಲೆ ತಿರುಗಿಸಿ ವಾಪಸ್ಸು ಹೋಗಲು ಪ್ರಯತ್ನಿಸಿದ್ದು ಬೈಕು ನಿಯಂತ್ರಣ ತಪ್ಪಿ ಬೈಕು ಬಿದ್ದಿದ್ದು ವಾಹನ ಸವಾರರು ಕೆಳಗಡೆ ಬಿದ್ದಿದ್ದು, ಅವರು ಎದ್ದು ಓಡಲು ಪ್ರಯತ್ನಿಸಿದ್ದು, ಜೀಪಿನಲ್ಲಿ ಇದ್ದ ಸಿಬ್ಬಂದಿಗಳು ಅವರನ್ನು ಬೆನ್ನಟ್ಟಿದ್ದು, ಅಲ್ಲಿ ಘಟನೆಯನ್ನು ನೋಡಿದ ಸ್ಥಳೀಯರು ಕೂಡ ಓಡುತ್ತಿದ್ದವರನ್ನು ಬೆನ್ನಟ್ಟಿದ್ದು ಅವರುಗಳು ತಪ್ಪಿಸಿಕೊಳ್ಳಲು ಗಿಡಗಳ ಪೊದೆಗಳ ಮಧ್ಯೆ ನುಗ್ಗಿ ಓಡುತ್ತಿದ್ದು ಅವರನ್ನು ಸುತ್ತುವರೆದು ಪೊಲೀಸ್ ಸಿಬ್ಬಂದಿಗಳು ಸಾರ್ವಜನಿಕರೊಂದಿಗೆ ಸೇರಿ ಅವರನ್ನು ಹಿಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ವಶಕ್ಕೆ ಪಡೆದ ಇಬ್ಬರು ವ್ಯಕ್ತಿಗಳನ್ನು ನನ್ನ ಮತ್ತು ಚಾಸಾ-6ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ನಮ್ಮ ಸಮಕ್ಷಮ ವಿಚಾರಿಸಲಾಗಿ ಅವರುಗಳು ಬೇರೆ ಬೇರೆ ಸ್ಥಳಗಳಲ್ಲಿ ಮಹಿಳೆಯರ ಕತ್ತಿನಿಂದ ಚಿನ್ನದ ಸರವನ್ನು ಕಿತ್ತುಕೊಂಡು ಹೋಗಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಅವರಿಬ್ಬರ ಹೆಸರನ್ನು ಕೇಳಲಾಗಿ ಅಹಮ್ಮದ್ ಮುಕ್ತಾರ್ ಮತ್ತು ಸಮೀರ್ ಅಹಮ್ಮದ್ ಬೇಗ್ ಎಂದು ತಿಳಿಸಿದ್ದು, ಇಬ್ಬರನ್ನು ಸ್ಥಳದಲ್ಲಿ ದಸ್ತಗಿರಿ ಮಾಡಿ ಅವರ ಮೋಟಾರು ಸೈಕಲನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಅಹಮ್ಮದ್ ಮುಕ್ತಾರ್ ನ ಅಂಗ ಜಪ್ತಿ ಮಾಡಲಾಗಿ ಆತನ ಪ್ಯಾಂಟಿನ ಕಿಸೆಯಲ್ಲಿ 2 ಎಳೆಯ ಒಂದು ಚಿನ್ನದ ಕರಿಮಣಿ ಸರ ಇದ್ದು, ಅದನ್ನು ಬೆಳಿಗ್ಗೆ 9-45 ಗಂಟೆಗೆ ಮಹಿಳೆಯರ ಕತ್ತಿನಿಂದ ಎಳೆದು ತಂದು ಕೊಟ್ಟಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಚೈನನ್ನು ಸ್ಥಳಕ್ಕೆ ಅಕ್ಕಸಾಲಿಗರಾದ ಸುರೇಶ್ ಎಂಬುವರನ್ನು ಬರಮಾಡಿಕೊಂಡು ಅದನ್ನು ಪರೀಕ್ಷಿಸಿ ಚಿನ್ನವೆಂದು ದೃಡಿಕರಿಸಿದ್ದು ಸುಮಾರು 22.300 ಗ್ರಾಂ ಇತ್ತು ಎಂದರೆ ಸರಿಯಲ್ಲ. ಆತನ ಪ್ಯಾಂಟಿನ ಕಿಸೆಯಲ್ಲಿ ಒಂದು ಚೂರಿ, ಒಂದು ಪರ್ಸ್ ಮತ್ತು ಒಂದು ಸ್ಯಾಮ್ ಸಂಗ್ ಮೊಬೈಲ್ ಮತ್ತು ಸಿಮ್ ಹಾಗೂ 320/- ರೂಪಾಯಿ ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ.

ಮತ್ತೊಬ್ಬ ಸಮೀರ್ ಅಹಮ್ಮದ್ ಬೇಗ್ ರವರ ಅಂಗ ಜಪ್ತಿ ಮಾಡಲಾಗಿ ಪ್ಯಾಂಟ್ ನ ಕಿಸೆಯಲ್ಲಿ ತುಂಡಾದ ಚೈನ್ ಸರ ಇದ್ದಿದ್ದು ಅದನ್ನು ಬೆಳಿಗ್ಗೆ 10-15 ಗಂಟೆಗೆ ಉಡುಪಿ ಕೃಷ್ಣ

ದೇವಸ್ಥಾನದ ಬಳಿ ಒಬ್ಬ ಮುದುಕಿಯ ಕತ್ತಿನಿಂದ ಎಳೆದಾಗ ತುಂಡಾಗಿ ಸಿಕ್ಕಿರುವುದಾಗಿ ತಿಳಿಸಿದ್ದು, ಅದನ್ನು ಕೂಡ ಅಕ್ಕಸಾಲಿಗರಾದ ಸುರೇಶ್ ಎಂಬುವರನ್ನು ಬರಮಾಡಿಕೊಂಡು ಅದನ್ನು ಪರೀಕ್ಷಿಸಿ ಚಿನ್ನವೆಂದು ದೃಡಿಕರಿಸಿದ್ದು ಸುಮಾರು 10.900 ಗ್ರಾಂ ಇತ್ತು ಎಂದರೆ ಸರಿಯಲ್ಲ. ಆತನ ಪ್ಯಾಂಟಿನ ಕಿಸೆಯಲ್ಲಿ ಒಂದು ಪರ್ಸ್, 520/- ನಗದು ಹಣ, ಚಾಲನಾ ಪತ್ರ, ಒಂದು ಸ್ಯಾಮ್ ಸಂಗ್ ಮೊಬೈಲ್ ಮತ್ತು ಸಿಮ್ ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಸದ್ರಿ ಆರೋಪಿತರನ್ನು ಮತ್ತು ಸ್ವತ್ತುಗಳನ್ನು ಹಾಗೂ ಬೈಕನ್ನು ನಮ್ಮ ಸಮಕ್ಷಮ 1 ರಿಂದ 3 ಗಂಟೆಯವರೆಗೆ ನಿಪಿ-7 ರಂತೆ ಮಹಜರು ತಯಾರಿಸಿ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಪಂಚನಾಮೆ ನನಗೆ ಓದಿ ತಿಳಿಸಿ ಸ್ಥಳದಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ